ಚಾ.ಸಾಃ 14, ಪ್ರಾ.ಸಾಃ 07

**ಸಾಕ್ಷಿಯನ್ನು ದಿನಾಂಕಃ 15-06-2024 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ವಿ. ಎಂ. ಭಂಡಾರಿಯವರಿಂದಃ**

2 ನೇ ಆರೋಪಿ ನನ್ನ ಅಂಗಡಿಗೆ ಬಂದು ಸಣ್ಣಪುಟ್ಟ ಒಡವೆಗಳನ್ನು ತೆಗೆದುಕೊಂಡು ಹೋಗುತ್ತಿದ್ದರು. 1 ನೇ ಆರೋಪಿ ಪರಿಚಯ ಇಲ್ಲ. ಆತ ನನ್ನ ಅಂಗಡಿಗೆ ಬಂದು ಒಡವೆಗಳನ್ನು ತೆಗೆದುಕೊಂಡು ಹೋಗಿರುವುದಿಲ್ಲ. 2 ನೇ ಆರೋಪಿ ನನ್ನ ಅಂಗಡಿಯಲ್ಲಿ ಕರಿಮಣಿ ಸರ, ನೆಕ್ಲೇಸ್, ಚೈನ್, ಕಿವಿಯೋಲೆ ಮತ್ತು ಸಣ್ಣ ಪುಟ್ಟ ಒಡವೆಗಳನ್ನು ಗಿರವಿ ಇಟ್ಟಿದ್ದರು. ಅವುಗಳ ಒಟ್ಟೂ ತೂಕ 83 ಗ್ರಾಂ 800 ಮಿಲಿ ಇತ್ತು. ಗಿರವಿ ಇಟ್ಟುಕೊಂಡ ಬಗ್ಗೆ ನಾನು ಯಾವುದೇ ರಸೀದಿಯನ್ನು ನೀಡಿರುವುದಿಲ್ಲ. 2 ನೇ ಆರೋಪಿ ನನ್ನ ಅಂಗಡಿಯಲ್ಲಿ ಯಾವುದೇ ಒಡವೆಗಳನ್ನು ಗಿರವಿ ಇಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ದಿನಾಂಕ 05-08-2020 ರಂದು ನಾನು ಹೊನ್ನಾವರ ಪೋಲೀಸ್ ಠಾಣೆಗೆ ಬಂದಿದ್ದೆ. ನಾನು 2 ನೇ ಆರೋಪಿಯಿಂದ ಗಿರವಿ ಇಟ್ಟುಕೊಂಡಿದ್ದ ಒಡವೆಗಳನ್ನು ಪೋಲೀಸರಿಗೆ ಕೊಟ್ಟಿದ್ದೇನೆ. ಪೋಲೀಸರು ಠಾಣೆಯಲ್ಲಿ ತೂಕ ಮಾಡಿ ಫೋಟೋ ತೆಗೆದು ತೆಗೆದುಕೊಂಡಿರುತ್ತಾರೆ. ತೂಕ ಮಾಡಿದಾಗ ಎಷ್ಟು ಗ್ರಾಂ ಇತ್ತು ನೆನಪಿಲ್ಲ. ಪೋಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಆರೋಪಿ ನನ್ನ ಬಳಿ ಯಾವುದೇ ಒಡವೆಗಳನ್ನು ಗಿರವಿ ಇಟ್ಟಿಲ್ಲ ಎಂದರೆ ಸರಿಯಲ್ಲ. ಪೋಲೀಸರು ನನ್ನನ್ನು ಠಾಣೆಗೆ ಕರೆದಿದ್ದರು ಮತ್ತು ನಾನು ಒಡವೆಗಳನ್ನು ಠಾಣೆಯಲ್ಲಿ ಹಾಜರು ಪಡಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**